ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1384
ಸದಸ್ಯರ ಹೆಸರು	:	ಶ್ರೀ ಅರುಣ ಶಹಾಪೂರ
ಉತ್ತರಿಸುವ ದಿನಾಂಕ	:	24-12-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕ್ರೈಸ್ ಸಂಸ್ಥೆಗಳ ಸಂಘದ ನೌಕರರಿಗೆ ಎನ್.ಪಿ.ಎಸ್ ಕಟಾವಣೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆ.ಇ 37 ಪಿ.ಇ.ಎನ್ 2019 ಬೆಂಗಳೂರು ದಿನಾಂಕ: 31.08.2019 ರ ಪ್ರಕಾರ ಸರ್ಕಾರದ ವಂತಿಗೆಯನ್ನು ದಿನಾಂಕ: 01.04.2019 ರಿಂದ ಜಾರಿಗೆ ಬರುವಂತೆ ಶೇ.10 ರಿಂದ 14ಕ್ಕೆ ಹೆಚ್ಚಿಸಲಾಗಿದ್ದು, ಸದರಿ ಸರ್ಕಾರಿ ಆದೇಶದಂತೆ ಎನ್.ಪಿ.ಎಸ್ ಎಂಪ್ಲಾಯರ್ ವಂತಿಗೆಯನ್ನು 14% ಅನ್ನು ಕ್ರೈಸ್ ನೌಕರರಿಗೆ ಜಮಾ ಮಾಡಲಾಗುತ್ತಿದೆಯೇ;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿನ ವಸತಿ ಶಾಲೆ/ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ 2016 ರಲ್ಲಿ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಲಾಗಿದೆ. ಅದರಂತೆ ಎನ್.ಪಿ.ಎಸ್ ನ ಶೇ.10 ರಷ್ಟು ಸರ್ಕಾರದ ವಂತಿಗೆಯನ್ನು ಪಾವತಿ ಮಾಡಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಆ.ಇ 37 ಪಿ.ಇ.ಎನ್ 2019, ದಿನಾಂಕ: 31.08.2019 ರ ಪ್ರಕಾರ ಸರ್ಕಾರದ ವಂತಿಗೆಯನ್ನು ದಿನಾಂಕ: 01.04.2019 ರಿಂದ ಜಾರಿಗೆ ಬರುವಂತೆ ಶೇ.10 ರಿಂದ 14ಕ್ಕೆ ಹೆಚ್ಚಿಸಲಾಗಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿನ ವಸತಿ ಶಾಲೆ/ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೂ ಎನ್.ಪಿ.ಎಸ್ ಎಂಪ್ಲಾಯರ್ ವಂತಿಗೆಯನ್ನು ಶೇ.10 ರಿಂದ 14ಕ್ಕೆ ಹೆಚ್ಚಿಸುವಂತೆ ಆರ್ಥಿಕ ಇಲಾಖೆಯ ಅನುಮೋದನೆ ಕೋರಲಾಗಿದ್ದು, ಅನುಮೋದನೆ ದೊರೆತ ನಂತರ ನಿಯಮಾನುಸಾರ ವಸತಿ ಶಾಲೆ/ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಶೇ.14% ರಷ್ಟು ಎನ್.ಪಿ.ಎಸ್ ಎಂಪ್ಲಾಯರ್ ವಂತಿಗೆಯನ್ನು ಪಾವತಿಸಲು ಕ್ರಮವಹಿಸಲಾಗುವುದು.
ಆ)	ಜಮಾ ಮಾಡದಿದ್ದಲ್ಲಿ, ಯಾವ ಕಾರಣಕ್ಕಾಗಿ ಮಾಡಲಾಗುತ್ತಿಲ್ಲ ಇರುವ ಸಮಸ್ಯೆಗಳೇನು;	
ಇ)	ಈ ಸಮಸ್ಯೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು (ವಿವರಗಳನ್ನು ಒದಗಿಸುವುದು)	
ಈ)	ಯಾವ ಕಾಲಮಿತಿಯ ಒಳಗೆ ಜಮಾ ಮಾಡಲು ಕ್ರಮ ವಹಿಸಲಾಗುವುದು?	

ಸಂಖ್ಯೆ: ಸಕಇ 567 ಮೊದೇಶಾ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.